First Cover

## ಸಂಜೆಯ

## ಸಾಂಸ್ಕೃತಿಕ ಕಾರ್ಯಕ್ರಮಗಳು

ಸ್ಥಳ:
ಶಿವರಾಮ ಕಾರಂತ ರಂಗಮಂದಿರ, ಹೆಗ್ಗೋಡು
ಸಮಯ: ಪ್ರತಿದಿನ ಸಂಜೆ ೭ ಗಂಟೆ
ಪ್ರವೇಶ:
ರೂ. ೧೦೦ (ಎಲ್ಲ ದಿನಕ್ಕೆ)
ರೂ. ೧೫, ರೂ. ೧೦ (ಪ್ರತಿದಿನ)

Second Cover

# ನೀನಾಸಮ್ ಸಂಸ್ಕೃತಿ ಶಿಬಿರ

## ಅಕ್ಟೋಬರ್ ೨೦೦೧

೧೯೭೮ರಿಂದ ಸತತವಾಗಿ ನೀನಾಸಮ್ ಪ್ರತಿ ಅಕ್ಟೋಬರಿನಲ್ಲಿ ಚಲನಚಿತ್ರ-ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತ ವಾಗಿದೆ. ಈ ಶಿಬಿರದಲ್ಲಿ ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ ಮುಂತಾದ ಸಾಂಸ್ಕೃತಿಕ ಮಾಧ್ಯಮಗಳ ಸ್ವರೂಪ, ವಿಮರ್ಶೆ, ಈ ಮಾಧ್ಯಮಗಳ ಪರಸ್ಪರ ಸಂಬಂಧ ಹಾಗೂ ಒಟ್ಟೂ ಸಮಾಜದೊಂದಿಗೆ ಸಂಸ್ಕೃತಿಯ ಸಂಪರ್ಕ — ಈ ವಿಷಯಗಳ ಬಗ್ಗೆ ಅಭ್ಯಾಸ, ಚರ್ಚೆ, ವಿಚಾರ ವಿನಿಮಯ ನಡೆಯುತ್ತದೆ. ಜತೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉತ್ಸವ ನಡೆಯುತ್ತದೆ.


ಶಿಬಿರ ಪ್ರಾರಂಭವಾಗುವುದು ಒಟ್ಟೂ ಕಾರ್ಯಕ್ರಮದ ಸ್ಥೂಲಸ್ವರೂಪವನ್ನು ಪರಿಚಯಿಸುವ ಕಿರು ಅಧಿವೇಶನ ದಿಂದ. ಆಮೇಲಿನ ದಿನಗಳಲ್ಲಿ ರಂಗಭೂಮಿಯ ಬಗ್ಗೆ, ಸಂಗೀತ-ನೃತ್ಯ ಮಾಧ್ಯಮಗಳ ಬಗ್ಗೆ, ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ, ಚಲನಚಿತ್ರ ಸಹೃದಯತೆಯ ಬಗ್ಗೆ ಮತ್ತು ಒಟ್ಟೂ ಸಂಸ್ಕೃತಿ- ಸಂವಹನದ ಪ್ರಕ್ರಿಯೆಯ ಬಗ್ಗೆ ಉಪನ್ಯಾಸ-ಪ್ರಾತ್ಯಕ್ಷಿಕೆ-ಚರ್ಚೆಗಳು ನಡೆಯುತ್ತವೆ. ಪ್ರತಿಯೊಂದು ವಿಷಯದ ಬಗ್ಗೆ ಶಿಬಿರ ನಡೆಯುವಾಗಲೂ ಆಯಾ ಮಾಧ್ಯಮದ ಆಯ್ದ ಕೃತಿಗಳನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗುತ್ತದೆ. ಶಿಬಿರ ಪ್ರತಿನಿತ್ಯ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಹಾಗೂ ಮಧ್ಯಾಹ್ನ ೨-೩೦ರಿಂದ ೬ ರ ತನಕ ನಡೆಯುತ್ತದೆ.

ಇದಲ್ಲದೆ ಪ್ರತಿದಿನ ಸಂಜೆ ರಂಗಪ್ರದರ್ಶನ, ಸಂಗೀತ, ನೃತ್ಯ ಹಾಗೂ ಇನ್ನಿತರ ಕಾರ್ಯಕ್ರಮಗಳು ಶಿಬಿರಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ಏರ್ಪಾಟಾಗಿರುತ್ತದೆ. ಸಂಜೆಯ ಹೊತ್ತು ನಡೆಯುವ ಈ ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಥೂಲ ವಿವರ ಮತ್ತು ಪರಿಚಯಗಳು ಮುಂದಿನ ಪುಟಗಳಲ್ಲಿವೆ.

**ಶಿಬಿರ ನಿರ್ದೇಶಕರು: ಡಾ. ಯು.ಆರ್. ಅನಂತಮೂರ್ತಿ**

Page 1

ಅಕ್ಟೋಬರ್ ೧೪ ಭಾನುವಾರ



ತಿರುಗಾಟ ನಾಟಕ

## ಪ್ರಮೀಳಾರ್ಜುನೀಯಮ್

ರಚನೆ: ಎಂ.ಎಲ್. ಶ್ರೀಕಂಠೇಶ ಗೌಡ

ಸಂಗೀತ: ಸುಭಾಷ್ ಹಾರೆಗೊಪ್ಪ, ಶ್ರೀಧರ ಹೆಗ್ಗೋಡು

ವಿನ್ಯಾಸ: ಚನ್ನಕೇಶವ

ನಿರ್ದೇಶನ: ಬಿ.ಆರ್. ವೆಂಕಟರಮಣ ಐತಾಳ

ಕ್ರಿ.ಶ. ೧೮೯೬ರಷ್ಟು ಹಿಂದೆಯೇ ರಚಿತವಾದ ಈ ಕನ್ನಡ ನಾಟಕವು ಶೇಕ್‌ಸ್ಪಿಯರನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ'ನ್ನು ಆಧರಿಸಿದ್ದರೂ ಸ್ವತಂತ್ರಕೃತಿಯೆನ್ನಬಹುದಾದ ಅನನ್ಯತೆಯನ್ನು ಪಡೆದುಕೊಂಡಿರುವ ಒಂದು ಅಪರೂಪದ ರಚನೆ. ಮಲೆಯಾಳ ನಾಡಿನಪ್ರಮದವನವೆಂಬ ಕಾಡಿನಲ್ಲಿ ನಡೆಯುವ ಈ ನಾಟಕದ ಕಥಾನಕವು ಸಮಾನಾಂತರವಾಗಿ ಜರುಗುವ ಹಲವು ಪ್ರೇಮಕಥನಗಳನ್ನುತನ್ನೊಳಗೆ ಕೂಡಿಸಿಕೊಂಡಿದೆ. ಅರ್ಜುನ ಮತ್ತು ಪ್ರಮೀಳೆಯರ ಪ್ರೇಮ ಈ ಕಥನಕ್ಕೆ ಒಂದು ಚೌಕಟ್ಟು ಒದಗಿಸುತ್ತದೆ; ರತಿ ಮನ್ಮಥರ ಪ್ರೇಮ ಈ ನಾಟಕದ ಸ್ವಾರಸ್ಯಗಳಿಗೆ ಕಾರಣವಾಗುತ್ತದೆ; ಎರಡು ಯುವಜೋಡಿಗಳ ಪ್ರೇಮದ ಕಥೆ ಮತ್ತು ಹಳ್ಳಿಗರು ನಡೆಸುವ ಒಂದು ನಾಟಕ ತಯಾರಿ ಈ ಕಥೆಗಳೊಂದಿಗೆ ಬೇರೆಬೇರೆ ರೀತಿಗಳಲ್ಲಿ ಹೆಣೆದುಕೊಳ್ಳುತ್ತ ನಾಟಕ ಬೆಳೆದುಕೊಳ್ಳುತ್ತದೆ.


ತಿರುಗಾಟದ ಎಲ್ಲ ನಾಟಕಗಳಿಗೆ ಪ್ರಚಾರ ಸಹಾಯ



ಗಡಿಯಾರಗಳು

Page 2

ಅಕ್ಟೋಬರ್ ೧೫ ಸೋಮವಾರ



ತಿರುಗಾಟ ನಾಟಕ

## ವಿದಿಷೆಯ ವಿದೂಷಕ

ಕಾಳಿದಾಸನ 'ಮಾಲವಿಕಾಗ್ನಿಮಿತ್ರ' ಆಧಾರ

ರೂಪಾಂತರ: ಕೆ.ವಿ. ಸುಬ್ಬಣ್ಣ

ಸಂಗೀತ: ಶ್ರೀಧರ ಹೆಗ್ಗೋಡು, ವಿನ್ಯಾಸ: ಚನ್ನಕೇಶವ

ನಿರ್ದೇಶನ: ಇಕ್ಬಾಲ್ ಅಹ್ಮದ್

ಪ್ರಾಚೀನ ಭಾರತದ ಮಹಾಕವಿಯೆಂದು ಪ್ರಸಿದ್ಧನಾದ ಕಾಳಿದಾಸನ ಈ ನಾಟಕವು ಕಾಳಿದಾಸನಿಗಿಂತ ಪ್ರಾಯಶಃ ೪-೫ ಶತಮಾನಗಳಷ್ಟು ಹಿಂದೆ ವಿದಿಶೆಯೆಂಬ ರಾಜ್ಯವನ್ನಾಳಿದ ರಾಜ ಅಗ್ನಿಮಿತ್ರನ ಕಥೆಯನ್ನು ಕೇಂದ್ರವಾಗಿಟ್ಟುಕೊಂಡಿದೆ. ಆ ಅಗ್ನಿಮಿತ್ರ ಅಂತಃಪುರದ ಒಬ್ಬ ದಾಸಿಯಿಂದ ಮೋಹಿತನಾಗಿ ಅವಳನ್ನು ಪಡೆಯಲು ತನ್ನ ಪರಿಜನರ ಸಹಾಯದೊಂದಿಗೆ ನಡೆಸುವ ಕಸರತ್ತುಗಳೇ ಈ ನಾಟಕದ ಘಟನೆಗಳು. ಅಂತಿಮವಾಗಿ ಆ ದಾಸಿ ರಾಜಕುಮಾರಿಯೆಂದು ಗೊತ್ತಾಗಿ ರಾಜನೊಂದಿಗೆ ಅವಳ ವಿವಾಹವಾಗುವುದರೊಂದಿಗೆ ನಾಟಕ ಮುಗಿಯುತ್ತದೆ. ಪ್ರಸ್ತುತ ರೂಪಾಂತರವು ಕಾಳಿದಾಸನ ಕೃತಿಯ ಐತಿಹಾಸಿಕತೆಯನ್ನೂ ವ್ಯಂಗ್ಯವನ್ನೂ ತುಸು ಹೆಚ್ಚು ಒತ್ತಿನೊಂದಿಗೆ ಕನ್ನಡದ ಸಂದರ್ಭದಲ್ಲಿ ಪುನರ್ನಿರೂಪಿಸುವ ಪ್ರಯೋಗ ಮಾಡುತ್ತದೆ.


ಪ್ರಾಯೋಜನೆ

**ಸೋಯಾ ಗುಡ್‌ರಿಚ್ ಲಿಮಿಟೆಡ್**

ಶಿವಮೊಗ್ಗ

Page 3

ಅಕ್ಟೋಬರ್ ೧೬ ಮಂಗಳವಾರ



ತಿರುಗಾಟ ನಾಟಕ

## ಕತ್ತಲೆಗೆ ಹತ್ತು ತಲೆ

ರಚನೆ: ಲಿಯೋ ಟಾಲ್‌ಸ್ಟಾಯ್

ಅನುವಾದ: ಜಸವಂತ ಜಾಧವ

ನಿರ್ದೇಶನ: ಚಿದಂಬರ ರಾವ್ ಜಂಬೆ

ಖ್ಯಾತ ರಷ್ಯನ್ ಲೇಖಕ ಟಾಲ್‌ಸ್ಟಾಯ್‌ನ ಈ ನಾಟಕವು ರಷ್ಯಾದ ಹಳ್ಳಿಯೊಂದರ ಜಮೀನ್ದಾರಿ ಕುಟುಂಬದ ಕಥೆಯನ್ನು ಕೇಂದ್ರವಾಗಿ ಇಟ್ಟುಕೊಂಡಿದೆ. ಮುದುಕ ಭೂಮಾಲಿಕನೊಬ್ಬನ ಎರಡನೆಯ ಹೆಂಡತಿ ಕೃಷಿಕನೊಬ್ಬನನ್ನು ಬಯಸಿ ಅವನಿಂದಲೇ ತನ್ನ ಗಂಡನನ್ನು ಕೊಲೆಮಾಡಿಸುವುದರಿಂದ ಆರಂಭವಾಗುವ ಈ ನಾಟಕ ಮುಂದೆ ಅದರ ಪರಿಣಾಮವಾಗಿ ನಡೆಯುತ್ತ ಹೋಗುವ ಹಲವು ಪಾಪಕೃತ್ಯಗಳ ಸರಣಿಯನ್ನು ಕಾಣಿಸುತ್ತ ಹೋಗುತ್ತದೆ. ನಿತ್ಯಜೀವನದ ನಡುವೆಯೇ ಪಾತಕಗಳು ಉದ್ಭವವಾಗುವ ಪ್ರಕ್ರಿಯೆಯನ್ನು ವಿಶ್ಲೇಷಣೆಗೆ ಹಚ್ಚುವ ಈ ಕೃತಿ ಅಂತಿಮವಾಗಿ ಈ ಸನ್ನಿವೇಶದ ನಡುವೆಯೇ ಅಂಥ ಪಾಪಕ್ಕೆ ಪ್ರಾಯಶ್ಚಿತ್ತವೂ ಇದ್ದೀತೆಂಬುದನ್ನು ಸೂಚಿಸಿ ಮುಗಿಯುತ್ತದೆ. ವಾಸ್ತವ ದರ್ಶನ ಮತ್ತು ಆಧ್ಯಾತ್ಮಿಕ ಹುಡುಕಾಟಗಳೆರಡನ್ನೂ ವಿಶಿಷ್ಟವಾಗಿ ಮೇಳೈಸಿಕೊಂಡಿರುವಂತಹ ಒಂದು ಅಪರೂಪದ ನಾಟಕ ಕೃತಿ ಇದು.

ಪ್ರಾಯೋಜನೆ

**ಮಲೆನಾಡು ಅರೆಕಾ ಸಿಂಡಿಕೇಟ್ಸ್**

ಶಿವಮೊಗ್ಗ

## ಅಕ್ಟೋಬರ್ ೧೭ ಬುಧವಾರ

ಮೋಹಿನಿಯಾಟ್ಟಮ್ ನೃತ್ಯ

# ಸೋಪಾನಮ್

ತಿರುವನಂತಪುರ – ತಂಡದ ಕಲಾವಿದರಿಂದ

ಕೇರಳದಲ್ಲಿ ಮತ್ತು ಹೊರಗೆ ತನ್ನ ಪ್ರಯೋಗಗಳಿಂದ ಹೆಸರು ಮಾಡಿದ ಒಂದು ಪ್ರಮುಖ ರಂಗತಂಡ – ತಿರುವನಂತಪುರದ 'ಸೋಪಾನಮ್'. ಖ್ಯಾತ ನಿರ್ದೇಶಕ ಕಾವಾಲಮ್ ನಾರಾಯಣ ಪಣಿಕ್ಕರ್ ಅವರಿಂದ ಸ್ಥಾಪಿತವಾಗಿರುವ ಈ ತಂಡ ಪಣಿಕ್ಕರ್ ಅವರ 'ಊರುಭಂಗ', 'ಮಧ್ಯಮವ್ಯಾಯೋಗ', 'ಶಾಕುಂತಲ' – ಮೊದಲಾದ ಖ್ಯಾತ ಪ್ರಯೋಗಗಳನ್ನು ದೇಶಾದ್ಯಂತ ಮತ್ತು ಹೊರಗೆ ಪ್ರದರ್ಶಿಸಿದೆ. ಈ ತಂಡದ ಕಲಾವಿದರಲ್ಲಿ ಹೆಚ್ಚಿನವರು ಕೇರಳದ ಶಾಸ್ತ್ರೀಯ ಮತ್ತು ಸಾಂಪ್ರದಾಯಿಕ ಕಲೆಗಳಲ್ಲಿ ತರಬೇತಿ ಪಡೆದಿದ್ದು ಆಗೀಗ ಅಂಥ ನೃತ್ಯ ಪ್ರದರ್ಶನಗಳನ್ನೂ ಕೊಡುವುದಿದೆ. ಪ್ರಸ್ತುತ ಕಾರ್ಯಕ್ರಮ ಅಂಥದು.

ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನರ್ತಕಿಯರು – ಮೋಹಿನಿ ವಿನಯನ್, ಮಾಲಿನಿ ವಿಜಯಕುಮಾರ್, ಸರಿತಾ ಜೆ.ಎಲ್., ಮಂಜು ವಿ., ಸಂಗೀತಗಾರರು – ದಯಾ ರವಿಂದ್ರನ್, ಎನ್.ಆರ್. ಸಂಜೀವ್, ಅನಿಲ್‌ಕುಮಾರ್ ಎಸ್., ಸಜಿತ್ ಟಿ.ವಿ., ರಾಮದಾಸ್ ಕೆ., ಜಯಶಂಕರ್. ತಂಡದ ನಿರ್ವಹಣೆ: ಆರ್. ಪಂಕಜಾಕ್ಷನ್ ನಾಯರ್.

ಪ್ರಾಯೋಜನೆ

**ಸಂಸ್ಕೃತಿ ಭಾರತಿ ಪ್ರತಿಷ್ಠಾನ**

**ದೆಹಲಿ**



## ಅಕ್ಟೋಬರ್ ೧೮ ಗುರುವಾರ

ಹಿಂದುಸ್ತಾನಿ ಗಾಯನ

# ಶ್ರೀಮತಿ ಕಲಾಪಿನಿ ಕೊಂಕಾಳಿ

ಮಧ್ಯಪ್ರದೇಶ – ಅವರಿಂದ

ಹಿಂದುಸ್ತಾನಿ ಸಂಗೀತದ ದಿಗ್ಗಜರಲ್ಲೊಬ್ಬರಾಗಿದ್ದ ಕುಮಾರ ಗಂಧರ್ವ ಅವರ ಮಗಳು – ಕಲಾಪಿನಿ ಕೊಂಕಾಳಿ, ತಮ್ಮ ತಂದೆ ಗಂಧರ್ವ ಹಾಗೂ ತಾಯಿ ವಸುಂಧರಾ ಕೊಂಕಾಳಿ ಅವರ ಬಳಿ ಸಂಗೀತಾಭ್ಯಾಸ ಮಾಡಿದ್ದಾರೆ. ಕುಮಾರ ಗಂಧರ್ವ ಅವರಂತೆಯೇ ಪರಿಷ್ಕೃತ ಗ್ವಾಲಿಯರ್ ಘರಾನಾದ ಶೈಲಿಯನ್ನು ರೂಢಿಸಿಕೊಂಡಿರುವ ಕಲಾಪಿನಿ ಅವರ ಧ್ವನಿ ಮತ್ತು ಶೈಲಿಗಳು ಗಂಧರ್ವವಿಧಾನಕ್ಕೆ ಅತ್ಯಂತ ಸಮೀಪವಾಗಿವೆಯೆಂದು ವಿಮರ್ಶಕರು ಹೇಳಿದ್ದಾರೆ. ಪ್ರಸ್ತುತ ಮಧ್ಯಪ್ರದೇಶದ ದೇವಾಸದಲ್ಲಿ ನೆಲೆಸಿ, ಕುಮಾರ ಗಂಧರ್ವ ಸಂಗೀತ ಅಕಾಡೆಮಿಯ ಟ್ರಸ್ಟಿಯಾಗಿ ಕೆಲಸ ಮಾಡುತ್ತಿರುವ ಕಲಾಪಿನಿಯವರು ಆ ಸಂಸ್ಥೆಯ ಮೂಲಕ ಸಂಗೀತ ಶಿಕ್ಷಣ ಮತ್ತು ಅಧ್ಯಯನಕ್ಕೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಿದ್ದಾರೆ. ದೇಶದ ಉದ್ದಗಲಕ್ಕೂ ಪ್ರತಿಷ್ಠಿತ ಸಮಾರಂಭಗಳಲ್ಲಿ ಇವರ ಸಂಗೀತ ಕಛೇರಿಗಳು ನಡೆದಿವೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ಅವರ ಸಾಥಿಗಳು – ವಸಂತ ಕನಕಾಪುರ (ಹಾರ್ಮೋನಿಯಂ) ತುಕಾರಾಂ ರಂಗಧೋಳ್ (ತಬಲಾ).

ಪ್ರಾಯೋಜನೆ

**ಕರ್ನಾಟಕ ಬ್ಯಾಂಕ್ ಲಿಮಿಟೆಡ್**

**ಪ್ರಧಾನ ಕಛೇರಿ: ಮಂಗಳೂರು**



## ಅಕ್ಟೋಬರ್ ೧೯ ಶುಕ್ರವಾರ

ಸಂಗಮ ಸಂಗೀತ

# ಲಯತರಂಗ

ಮೈಸೂರು – ತಂಡದ ಕಲಾವಿದರಿಂದ

ಸಂಗೀತ ಕ್ಷೇತ್ರದಲ್ಲಿ ಹೊಸ ಪ್ರಯೋಗಶೀಲತೆಯನ್ನು ನಡೆಸುವ ಉದ್ದೇಶವಿಟ್ಟುಕೊಂಡು ೧೯೯೭ರಲ್ಲಿ ಆರಂಭವಾದ ಲಯತರಂಗ ಸಂಸ್ಥೆ ಕರ್ನಾಟಕ ಶಾಸ್ತ್ರೀಯ ಮತ್ತು ಪಾಶ್ಚಿಮಾತ್ಯ ಸಂಗೀತ ಮಾದರಿಗಳನ್ನು ಸಂಯೋಜಿಸಿ ಪ್ರಯೋಗಿಸುತ್ತದೆ. ಕಲಾತ್ಮಕ ಆವಿಷ್ಕಾರ ಮತ್ತು ಸಮಕಾಲೀನ ಅಭಿರುಚಿಗಳ ಆಕರ್ಷಣೆ – ಇವೆರಡನ್ನೂ ಒಟ್ಟೊಟ್ಟಿಗೇ ಸೃಷ್ಟಿಸುವುದನ್ನು ಗುರಿಯಾಗಿಟ್ಟು ಕೊಂಡಿರುವ ಈ ತಂಡ, ಈಗಾಗಲೇ ದೇಶಾದ್ಯಂತ ಮತ್ತು ಹೊರಗೆ ಪ್ರದರ್ಶನಗಳನ್ನು ಕೊಟ್ಟಿದೆ; ಧ್ವನಿಸುರುಳಿಗಳನ್ನೂ ಹೊರತಂದಿದೆ.

ಕಲಾವಿದರು – ರವಿಚಂದ್ರ ಕೂಳೂರು (ಕೊಳಲು), ಸೊಲೊ ಮನ್ (ಕೀಬೋರ್ಡ್), ಸತ್ಯನಾರಾಯಣ ಎ.ವಿ. (ಪಿಟೀಲು), ಜಯಚಂದ್ರ ಕೂಳೂರು (ಮೃದಂಗ), ಮಧು (ತಬಲಾ), ಯು.ಎನ್. ಗಿರಿಧರ ಉಡುಪ (ಘಟ, ಕೊನ್ನಕೊಳ್), ವಿಷ್ಣು ಸ್ವರೂಪ್ (ಮೋರ್ಚಿಂಗ್), ಪ್ರಮಥ ಕಿರಣ (ತಬಲಾ, ಧೋಲಕ್), ಅರುಣ ಕುಮಾರ್ (ತಾಳವಾದ್ಯ) ಮತ್ತು ಶ್ರೀಧರ ನಾಯ್ಡು (ಸ್ಯಾಕ್ಸೊಫೋನ್).

ಪ್ರಾಯೋಜನೆ

**ಎಂ.ಎಸ್.ಐ.ಎಲ್. ಲಿಮಿಟೆಡ್**

**ಬೆಂಗಳೂರು**

## ಅಕ್ಟೋಬರ್ ೨೦ ಶನಿವಾರ

ಆಧುನಿಕ ನೃತ್ಯ

# ಸಮುದ್ರಾ

ತಿರುವನಂತಪುರ – ತಂಡದವರಿಂದ

ಭಾರತದಲ್ಲಿ ಆಧುನಿಕ ನೃತ್ಯವೆಂಬ ಹೊಸ ಶಾಖೆಯನ್ನು ಬೆಳೆಸಿ ವಿಸ್ತರಿಸಲು ಪ್ರಯತ್ನಿಸುತ್ತಿರುವ ಅಪರೂಪದ ತಂಡಗಳಲ್ಲೊಂದು – ೧೯೯೭ರಲ್ಲಿ ಸ್ಥಾಪಿತವಾದ ಸಮುದ್ರಾ. ಶಾಸ್ತ್ರೀಯ ಭರತನಾಟ್ಯ ಮತ್ತು ಸಮರಕಲೆಗಳಾದ ಕಳರಿಪಯಟ್, ಮಲ್ಲಕಂಭ ಮೊದಲಾದವನ್ನು ಕೂಡಿಸಿ ಆ ಮೂಲಕ ಹೊಸದೊಂದು ದೇಹಾಭಿವ್ಯಕ್ತಿ ಭಾಷೆಯನ್ನೂ ಪ್ರಾಯೋಗಿಕ ನೃತ್ಯಮಾರ್ಗವನ್ನೂ ಆವಿಷ್ಕರಿಸಿಕೊಂಡಿರುವ ಈ ತಂಡವು ಅಂಥ ಹಲವು ಪ್ರಯೋಗಗಳನ್ನು ದೇಶ-ವಿದೇಶದ ಪ್ರಮುಖ ಸ್ಥಳಗಳಲ್ಲಿ ಈಗಾಗಲೇ ಪ್ರದರ್ಶಿಸಿ ಪ್ರಸಿದ್ಧಿಯನ್ನು ಗಳಿಸಿದೆ. ಈ ತಂಡದ ನರ್ತಕರು ಶಾಸ್ತ್ರೀಯ ಸಾಂಪ್ರದಾಯಿಕ ನೃತ್ಯಕಲೆಗಳಲ್ಲಿ ದೀರ್ಘ ತರಬೇತಿ ಪಡೆದಿದ್ದಾರೆ; ಆಧುನಿಕ ನೃತ್ಯದ ಸಮಕಾಲೀನ ಸ್ಪಂದನ ಮತ್ತು ಪ್ರಯೋಗಶೀಲತೆಗಳನ್ನು ಮೈಗೂಡಿಸಿಕೊಂಡಿದ್ದಾರೆ.

ತಂಡದಲ್ಲಿರುವ ನೃತ್ಯ ಕಲಾವಿದರು – ಮಧು ಗೋಪಿನಾಥ್, ವಾಕ್ಕಮ್ ಸಜೀವ್, ಆಜಿಕುಮಾರ್ ಕೆ., ದೀಪಾ ಎಂ.ಎಸ್. ಸಂಗೀತಗಾರರು – ಕಲಾಮಂಡಲಂ ಆನಂದ್ ಮತ್ತು ಎಸ್. ದಾಸನ್.

**ಪ್ರಾಯೋಜನೆ**
**ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ**
**ಶಿವಮೊಗ್ಗ**



## ಅಕ್ಟೋಬರ್ ೨೧ ಭಾನುವಾರ

ನಾಟಕ ಪ್ರದರ್ಶನ

ಸುಬ್ರಹ್ಮಣ್ಯದ 'ಕುಸುಮ ಸಾರಂಗ' ತಂಡದವರಿಂದ

# ಮಹಾಮಾಯಿ

ರಚನೆ: ಚಂದ್ರಶೇಖರ ಕಂಬಾರ,

ನಿರ್ದೇಶನ: ಜೀವನರಾಮ್ ಸುಳ್ಯ

ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯದ ಕೆ.ಎಸ್.ಎಸ್. ಕಾಲೇಜಿನ ವಿದ್ಯಾರ್ಥಿಗಳ ರಂಗತಂಡವಾಗಿರುವ 'ಕುಸುಮ ಸಾರಂಗ'ವು ಆರಂಭವಾಗಿದ್ದು ೧೯೯೩ರಲ್ಲಿ. ಕಾಲೇಜಿನ ವಿದ್ಯಾರ್ಥಿಗಳಲ್ಲಿ ರಂಗಚಟುವಟಿಕೆಗಳನ್ನು ಉತ್ತೇಜಿಸುವ ಉದ್ದೇಶವಿಟ್ಟುಕೊಂಡಿರುವ ಈ ತಂಡವು ಇದುವರೆಗೆ ಕನ್ನಡದ ಹಲವು ವೃತ್ತಿಶೀಲ ನಿರ್ದೇಶಕರನ್ನು ಕರೆಸಿ ಅವರಿಂದ 'ಸಿರಿಸಂಪಿಗೆ', 'ಅಂಧಯುಗ', 'ಸೂರ್ಯಶಿಕಾರಿ', 'ಅಗ್ನಿ ಮತ್ತು ಮಳೆ' ಮೊದಲಾದ ಪ್ರಯೋಗಗಳನ್ನು ಸಿದ್ಧಪಡಿಸಿ ಅವುಗಳನ್ನು ಹಲವಾರು ಊರುಗಳಲ್ಲಿ ಪ್ರದರ್ಶನ ಮಾಡಿದೆ.

ಪ್ರಸ್ತುತ ನಾಟಕ 'ಮಹಾಮಾಯಿ' ಚಂದ್ರಶೇಖರ ಕಂಬಾರರ ಈಚಿನ ಕೃತಿ. ಸಾವನ್ನು ಪ್ರತಿನಿಧಿಸುವ ತಾಯಿ ಮತ್ತು ಸ್ವಾತಂತ್ರ್ಯದ ಹಂಬಲದ ಮಗ – ಇವರ ನಡುವಿನ ಸಂಘರ್ಷವನ್ನು ಒಂದು ಬೃಹತ್ ನಾಟಕ ಮತ್ತು ರಂಗ ಪ್ರತಿಮೆಯಾಗಿ ಬೆಳೆಸಿ ಪರಿಶೀಲಿಸುವ ಕೃತಿ ಇದು.

**ಪ್ರಾಯೋಜನೆ**
**ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್**
**ಭೀಮನಕೋಣೆ**



# NINASAM

Heggodu, Sagara Tq.,Shimoga Dist.,
Karnataka 577 417
Ph: 08183-65646 Fax: 08183-65673

We are grateful to
the following organisations
for their kind sponsorship support
for the cultural festival:

**Karnataka Bank Ltd.**
H.O. Mangalore

**Malnad Areca Marketing Co-operative Society Ltd.**
Shimoga

**Sanskriti Bharati Trust**
Delhi

**Mysore Sales International Ltd.**
Bangalore

**Malnad Arecanut Syndicate**
Shimoga

**Soya Goodrich Ltd.**
Shimoga

**Primary Co-operative Agricultural and Rural Development Bank Ltd.**
Bheemanakone